# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,
# ದ.ಕ., ಮಂಗಳೂರು.

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 188/2018, 80/2023** | |
| ಪ್ರಾ.ಸಾ.12 | ಚಾ.ಸಾ.20 |

| | |
|---|---|
| ಸಾಕ್ಷಿದಾರರ ಹೆಸರು | ಧನರಾಜ್ ಶೆಟ್ಟಿ |
| ತಂದೆಯ ಹೆಸರು | ವಸಂತ ಶೆಟ್ಟಿ |
| ಪ್ರಾಯ | 42 ವರ್ಷ |
| ಉದ್ಯೋಗ | ಸಾರಿಗೆ ವ್ಯವಹಾರ |
| ವಾಸಸ್ಥಳ | ಸುಂದರಿ ಕಾಂಪೌಂಡ್, ಬೊಕ್ಕಪಟ್ನ, ಮಂಗಳೂರು |
| ದಿನಾಂಕ | **12.12.2024** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ದಿನಾಂಕ 02.11.2015 ರಂದು ನನ್ನನ್ನು ಪೊಲೀಸರು ಬರ್ಕೆ ಠಾಣೆಗೆ ಕರೆಯಿಸಿದ್ದರು. ಠಾಣೆಯಲ್ಲಿ ಪೊಲೀಸ್ ಪೇದೆಯವರು ಹಾಜರುಪಡಿಸಿದ ಮಂಗಳೂರು ಜೈಲಿನಲ್ಲಿ ಕೊಲೆಯಾದ ಶೆಟ್ಟಿ ಎಂಬ ವ್ಯಕ್ತಿಯ ಬರ್ಮುಡ ಚಡ್ಡಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದು, ಪೊಲೀಸರು ಅದನ್ನು ಪ್ಯಾಕ್ ಮಾಡಿ ತಮ್ಮ ಸ್ವಾಧೀನಕ್ಕೆ ಪಡೆದಿರುತ್ತಾರೆ. ಸದರಿ ಬರ್ಮುಡದಲ್ಲಿ ರಕ್ತದ ಕಲೆಗಳು ಇದ್ದವು. ಪಂಚನಾಮೆಯನ್ನು ರಾತ್ರಿ 08.00 ರಿಂದ 08.30 ರವರೆಗೆ ಜರುಗಿಸಲಾಗಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಪಿ-**16** ಮತ್ತು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪಿಂಕ್ ಬಣ್ಣದ ಬರ್ಮುಡ ಚಡ್ಡಿಯನ್ನು ಮು.ಮಾ-26 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನನ್ನ ಜೊತೆ ಚಾಸಾ-19 ಸಹ ಆ ದಿನ ಪಂಚನಾಮೆಯ ಕಾಲಕ್ಕೆ ಹಾಜರಿದ್ದರು. ಸಾಕ್ಷಿ ಮು.ಮಾ-26 ರ ಮೇಲಿನ ಬಿಳಿಯ ಲೇಬಲ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-26(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 5 ನೇ ಆರೋಪಿತನ ಪರ ಶ್ರೀ ಐ.ಬಿ., ವಕೀಲರಿಂದ.**

ತನಿಖಾಧಿಕಾರಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-16 ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಮು.ಮಾ-26 ನ್ನು ಸ್ವಾಧೀನಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಬರ್ಕೆ ಠಾಣೆಗೆ ದಿನಾಂಕ 02.11.2015 ರಂದು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಉಳಿದ ಆರೋಪಿತರ ಪರ ವಕೀಲರಿಂದ.**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವಂತೆ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.